ವಿಧಾನ ಸಭೆ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 4768ಕ್ಕೆ ಅನುಬಂಧ-2

ಉಡುಪಿ ಜಿಲ್ಲೆಗೆ ಸಂಬಂಧಿಸಿದಂತೆ ವಿಧಾನ ಸಭಾವಾರು ಮಂಜೂರಾದ ಮನೆಗಳ ವಿವರ

ಜಿಲ್ಲೆ	ವಿಧಾನ ಸಭಾ ಕ್ಷೇತ್ರ	ಮಂಜೂರಾದ ಮನೆಗಳ ಸಂಖ್ಯೆ	ಪೂರ್ಣಗೊಂಡ ಮನೆಗಳ ಸಂಖ್ಯೆ
ಉಡುಪಿ	1. ಕಾಪು	227	103
	2. ಉಡುಪಿ	172	79
	3. ಬ್ರಹ್ಮಾವರ	401	318
	4. ಕುಂದಾಪುರ	350	247
	5. ಬೈಂದೂರು	320	185
	6. ಕಾರ್ಕಳ	40	--
	ಒಟ್ಟು	1510	932

ರಾಜ್ಯದಲ್ಲಿ ವಿಭಾಗ ಮಟ್ಟದ ವಕ್ಫ್ಸ್ ಟ್ರಿಬ್ಯೂನಲ್

4169 (4594) : ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯಾತ್ ಖಾನ್ (ಹುಬ್ಬಳ್ಳಿ) ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ಸ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ವಿಭಾಗ ಮಟ್ಟದ ವಕ್ಫ್ಸ್ ಟ್ರಿಬ್ಯೂನಲ್ ರಚನೆ ರಚಿಸಲಾಗಿದೆಯೇ?

ಆ) ವಕ್ಫ್ಸ್ ಟ್ರಿಬ್ಯೂನಲ್ ರಚನೆಯ ರೂಪುರೇಷಗಳೇನು: ಇದರಲ್ಲಿ ಸರ್ಕಾರದ ಅಧಿಕಾರಿಗಳೆಷ್ಟು: ಸರ್ಕಾರೇತರ ಸದಸ್ಯರುಗಳೆಷ್ಟು?

ಇ) ಯಾವಯಾವ ವಿಭಾಗ ಮಟ್ಟದಲ್ಲಿ ವಕ್ಫ್ಸ್ ಟ್ರಿಬ್ಯೂನಲ್ ಅಸ್ತಿತ್ವಕ್ಕೆ ಬಂದಿರುತ್ತದೆ. ವಿವರ ನೀಡುವುದು. ಮತ್ತು ವಕ್ಫ್ಸ್ ಟ್ರಿಬ್ಯೂನಲ್ ಕಛೇರಿಗಳ ವಿಳಾಸ ತಿಳಿಸುವುದು.

ಶ್ರೀ ಎಂ.ಎಲ್. ಉಸ್ತಾದ್ (ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ಸ್ ಸಚಿವರು)

ಅ) -- ಹೌದು --

ಆ) ವಕ್ಫ್ಸ್ ಕಾಯಿದೆ 1995ರ ಕಲಂ 83(1)ರಲ್ಲಿ ರಾಜ್ಯದಲ್ಲಿ ವಕ್ಫ್ಸ್ ಸಂಸ್ಥೆಗಳಿಗೆ ಸಂಬಂಧಿಸಿದಂತೆ ತಕರಾರು ಇದ್ದಲ್ಲಿ ಅವುಗಳನ್ನು ನ್ಯಾಯಾಂಗ ವ್ಯವಹರಣೆ ನಡೆಸಲು ಬೇಗನೇ ಇತ್ಯರ್ಥಗೊಳಿಸುವ ಉದ್ದೇಶದಿಂದ ವಕ್ಫ್ಸ್ ನ್ಯಾಯ ಮಂಡಳಿಗಳನ್ನು ರಚಿಸಲು ಸರ್ಕಾರಕ್ಕೆ ಅಧಿಕಾರವಿದೆ. ಹಾಗೂ ಆದ ಕಾಯಿದೆಯ ಅಧಿನಿಯಮ 83(4) ರನ್ವಯ ಪ್ರತಿ ವಕ್ಫ್ಸ್ ನ್ಯಾಯಮಂಡಳಿಯ ಜಿಲ್ಲಾ ನ್ಯಾಯಾಧ್ಯಕ್ಷ ಹುದ್ದೆಗಿಂತ ಕಡಿಮೆ ಇಲ್ಲದ ಒಬ್ಬ ನ್ಯಾಯಾಧಿಕಾರಿ ಹೊಂದಿರಬೇಕಾಗುತ್ತದೆ. ಅದರಂತೆ ಸರ್ಕಾರಿ ಆದೇಶ ಸಂಖ್ಯೆ: ಆರ್.ಡಿ. 45 ಡಬ್ಲ್ಯೂಇಎಸ್ 97 ದಿನಾಂಕ: 6.1.1999ರಲ್ಲಿ ರಾಜ್ಯದ 4 ಕಂದಾಯ ವಿಭಾಗಗಳಲ್ಲಿ 4 ವಕ್ಫ್ಸ್ ನ್ಯಾಯಮಂಡಳಿಗಳನ್ನು ರಚಿಸಲಾಗಿದೆ. ಸದರಿ ಟ್ರಿಬ್ಯುನಲ್‌ಗಳಲ್ಲಿ ಸರ್ಕಾರಿ ಅಥವಾ ಸರ್ಕಾರೇತರ ಸದಸ್ಯರುಗಳನ್ನು ನೇಮಿಸಲು ಅವಕಾಶವಿರುವುದಿಲ್ಲ.

ಇ) ವಿಭಾಗದ ಕೇಂದ್ರ ಸ್ಥಾನದ ಎದುರು ನಮೂದಿಸಿರುವ ದಿನಾಂಕದಿಂದ 4 ಕಂದಾಯ ವಿಭಾಗಗಳಾದ ಬೆಂಗಳೂರು ಮೈಸೂರು, ಬೆಳಗಾವಿ ಮತ್ತು ಗುಲ್ಬರ್ಗಾಗಳಲ್ಲಿರುವ ವಕ್ಫ್ಸ್ ಟ್ರಿಬ್ಯೂನಲ್‌ಗಳು ಈಗಾಗಲೇ ಕಾರ್ಯ ನಿರ್ವಹಿಸುತ್ತಿವೆ.

1. ಬೆಂಗಳೂರು ವಿಭಾಗ – 02.08.2001
   ಹಜರತ್ ಹಮಾದ್ ಷಾ ಕಾಂಪ್ಲೆಕ್ಸ್, ಕಬ್ಬನ್‌ಪೇಟೆ, ಬೆಂಗಳೂರು.
2. ಮೈಸೂರು ವಿಭಾಗ – 27.5.2002
   ನ್ಯೂ ಮುಸ್ಲಿಂ ಹಾಸ್ಟೆಲ್ ಕಟ್ಟಡ, ಸರಸ್ವತಿಪುರಂ, ಮೈಸೂರು.
3. ಬೆಳಗಾವಿ – 27.05.2002
   ತಾಳಿಕೋಟೆ ಕಟ್ಟಡ ಮುರಗ್ ಮಂಡಲ್ ಡೆಂಟಲ್ ಕಾಲೇಜು ಎದುರು ಸುಭಾಷ್ ನಗರ, ಬೆಳಗಾವಿ.
4. ಗುಲ್ಬರ್ಗಾ ವಿಭಾಗ – 27.05.2002
   ಮುಸ್ಲಿಂ ಹಾಸ್ಟೆಲ್ ಕಟ್ಟಡ, ಸ್ಟೇಷನ್ ರೋಡ್, ಗುಲ್ಬರ್ಗಾ

ಹುಬ್ಬಳ್ಳಿ–ಧಾರವಾಡ ಮಹಾನಗರ ವ್ಯಾಪ್ತಿಯಲ್ಲಿನ ಸಣ್ಣ ಕೈಗಾರಿಕೆಗಳಿಗೆ ಸಹಾಯಧನ

4170 (4595) : ಶ್ರೀ ಹೊನ್ನಾಳಿ ಬಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) ಮಾನ್ಯ ಸಣ್ಣ ಕೈಗಾರಿಕೆಗಳ ಹಾಗೂ ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸಣ್ಣ ಕೈಗಾರಿಕೆಗಳ ಒಟ್ಟು ಸಂಖ್ಯೆಗಳೆಷ್ಟು; ಜಿಲ್ಲಾವಾರು ವಿವರ ನೀಡುವುದು;

ಆ) ಸಣ್ಣ ಕೈಗಾರಿಕೆಗಳ ಪುನಶ್ಚೇತನಕ್ಕೆ ಕೈಗೊಂಡ ಕ್ರಮಗಳಾವುವು; ವಿವರ ತಿಳಿಸುವುದು;

ಇ) ಯಾವ ಜ್ವಲಂತ ಸಮಸ್ಯೆಗಾಗಿ ಸಣ್ಣ ಕೈಗಾರಿಕೆಗಳು ತೊಂದರೆ ಅನುಭವಿಸುತ್ತಿವೆ; ಅಂತಹ ಜ್ವಲಂತ ಸಮಸ್ಯೆಗಳನ್ನು ನಿವಾರಿಸಲು ಕೈಗೊಂಡ ಕ್ರಮಗಳೇನು?

ಈ) ಸಣ್ಣ ಕೈಗಾರಿಕೆಗಳಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಕಳೆದ 3 ವರ್ಷಗಳಲ್ಲಿ ಎಷ್ಟು ಸಹಾಯಧನ ನೀಡಲಾಗಿದೆ; ವರ್ಷವಾರು ಹಾಗೂ ಜಿಲ್ಲಾವಾರು ವಿವರ ನೀಡುವುದು;

ಉ) ಇದರಲ್ಲಿ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸಣ್ಣ ಕೈಗಾರಿಕೆಗಳಿಗೆ ಬಾಕಿ ಇರುವ ಸಹಾಯಧನ ಮೊತ್ತವೆಷ್ಟು; ಹಾಗೂ ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಕೈಗಾರಿಕೆಗಳ ಹಾಗೂ ಹಜ್ ಸಚಿವರು)

ಅ) 2,98,218.

ಜಿಲ್ಲಾವಾರು ವಿವರ ಲಗತ್ತಿಸಲಾಗಿದೆ.

ಆ) ಪುನಶ್ಚೇತನಗೊಳಿಸಲು ರೋಗಗ್ರಸ್ತ ಕೈಗಾರಿಕೆಗಳಿಗೆ ಈ ಕೆಳಕಂಡ ಸೌಲಭ್ಯಗಳನ್ನು ಸರ್ಕಾರ ನೀಡುತ್ತಿದೆ;

1. ಘಟಕದ ಪುನಶ್ಚೇತನ ಯೋಜನಾ ವೆಚ್ಚ, ಶೇ. 25 ರಷ್ಟು ಹಣವನ್ನು ರೂ. 2.50 ಲಕ್ಷಗಳ ಮಿತಿಗೊಳಪಟ್ಟು ಬಡ್ಡಿ ರಹಿತ ಬೀಜಧನ ಸಾಲದ ರೂಪದಲ್ಲಿ ನೀಡಲಾಗುತ್ತದೆ.
2. ಕೆ.ಪಿ.ಟಿ.ಸಿ.ಎಲ್. ಹಾಗೂ ಇತರ ಪ್ರಾಂತೀಯ ವಿದ್ಯುತ್ ಸರಬರಾಜು ಕಂಪನಿಗಳು ಘಟಕವು ಮುಚ್ಚಿದ ಅವಧಿಯಲ್ಲಿ ನಿಗದಿತ ದರ ಹಾಗೂ ಬೇಡಿಕೆ ದರ ಪಾವತಿಯಿಂದ ವಿನಾಯಿತಿ ನೀಡುವುದು.
3. ವಿದ್ಯುತ್ ಬಾಕಿ ದರಗಳನ್ನು ಆರು ಅರ್ಧವಾರ್ಷಿಕ ಕಂತುಗಳಲ್ಲಿ ಶೇ. 6ರ ಬಡ್ಡಿ ಪಾವತಿಯಿಂದ ವಿನಾಯಿತಿ.
4. ಘಟಕವು ಮುಚ್ಚಿದ ಅವಧಿಗೆ ಬಡ್ಡಿ ಪಾವತಿಯಿಂದ ವಿನಾಯಿತಿ.